`ಮೈ... ಗಾಡ್... ನೀನಾ...?'' ನೋಡಲಾಗದ ಅಸಹ್ಯಕರ ದೃಶ್ಯ ಕಾಣುತ್ತಿದೆ.

* * *

ಎಲ್ಲಿಗೆ ಹೋಗಬೇಕು ಅಂತ ಗೊತ್ತಿಲ್ಲ. ಯಾರನ್ನು ಕಾಣಬೇಕು ಎಂದು ತೀರ್ಮಾನಿಸಿಲ್ಲ. ನಿಧಾನವಾಗಿ ನಡೆಯುತ್ತಿದ್ದಾನೆ. ಅದು ಕಾಡಿನ ರಸ್ತೆ. ಕತ್ತಲು ಆವರಿಸುತ್ತಿದೆ. ಕತ್ತಲಿನ ಭಯ ಇಲ್ಲ. ಯಾಕೆ ಅಂದರೆ ಕತ್ತಲಾದ ಮೇಲೆ ಇವನ ಕೆಲಸ ಪ್ರಾರಂಭವಾಗುತ್ತಿತ್ತು.

ಪ್ರೇತಪಿಶಾಚಿಗಳ ಭಯ ಇಲ್ಲ. ಯಾಕೆ ಅಂದರೆ ಅವುಗಳನ್ನು ನಿಯಂತ್ರಿಸುವ ಮಾಂತ್ರಿಕ ಮದಂತ ಇವನು. ಜುಬ್ಬಾಪೈಜಾಮ ಧರಿಸಿದ್ದಾನೆ. ಬಗಲಲ್ಲಿ ಬಟ್ಟೆ ಬ್ಯಾಗ್ ನೇತಾಡುತ್ತಿದೆ. ಕೈಯಲ್ಲಿ ಟಾರ್ಚ್ ಇದೆ.

ಮದಂತ ಈ ರಸ್ತೆ ಎಲ್ಲಿಗೆ ಕೊನೆಯಾಗುತ್ತದೋ ಅಲ್ಲಿಯ ತನಕ ಹೋಗಬೇಕು ಎಂದುಕೊಂಡಿದ್ದಾನೆ. ಸಂಸಾರದ ಬಂಧನ ಇಲ್ಲ. ಬದುಕಿನಲ್ಲಿ ನಿಶ್ಚಿತ ಗುರಿ ಇಲ್ಲ. ಈಗಾಗಲೇ ನಲವತ್ತು ವಸಂತಗಳನ್ನು ಕಳೆದಿದ್ದಾನೆ ಈ ಮದಂತ. ಯಾಕೋ ಉತ್ಸಾಹವೇ ಇಲ್ಲ. ತಂಗಾಳಿ ಹಿತವಾಗಿ ಬೀಸುತ್ತಿದೆ. ಕತ್ತಲಿನ ಛಾಯೆಯಲ್ಲಿ ಮರಗಳು ರಾಕ್ಷಸ ರೂಪ ತಳೆದು ಅಡ್ಡ ನಿಂತಿರುವಂತೆ ಕಾಣುತ್ತಿದೆ.

ಆಗೊಂದು ಅನಾಹುತ ನಡೆಯಿತು. ಕತ್ತಲಲ್ಲಿ ಸರಿಯಾಗಿ ಗಮನಿಸದೆ ರಸ್ತೆಯ ಬಲಭಾಗದ ತುದಿಯಲ್ಲಿದ್ದ ಕೆಸರಿನ ಗುಂಡಿಯಲ್ಲಿ ಕಾಲನ್ನು ಇರಿಸಿದ್ದ. ಸರ್ರನೆ ದೇಹ ಜಾರಿತು. ಕೆಸರಿನಲ್ಲಿ ದೇಹ ಇಳಿಯುತ್ತಿದೆ. ಅವನು ಗಾಬರಿಯಿಂದ ತುಸು ಗಟ್ಟಿಯಾಗಿದ್ದ ಹುಲ್ಲಿನ ಜೊಂಡನ್ನು ಹಿಡಿದುಕೊಂಡ. ಕೆಸರು ಎದೆಯ ತನಕ ಆವರಿಸುತ್ತಿದೆ. ಪ್ರಾಣ ಭಯದಿಂದ ಚಡಪಡಿಸುತ್ತಿದ್ದಾನೆ. ದೊಡ್ಡ ಮಾಂತ್ರಿಕ ಇವನು. ಹಲವಾರು ರೀತಿಯಲ್ಲಿ ಸಾಧನೆಯನ್ನು ಮಾಡಿದ್ದರೂ ಸಹ ಉಪಯೋಗವಿಲ್ಲ.

ಇವನು ವಶಪಡಿಸಿಕೊಂಡಿರುವ ಯಾವ ಕ್ಷುದ್ರಶಕ್ತಿಯೂ ಬಂದು ಕಾಪಾಡುತ್ತಿಲ್ಲ. ಕ್ಷುದ್ರಶಕ್ತಿ ತಾವೇ ಬರುವುದಿಲ್ಲ. ಮಂತ್ರದ ಶಕ್ತಿಯಿಂದ ಆಕರ್ಷಿಸಬೇಕು. ಪ್ರಾಣವೇ ಹೋಗುತ್ತಿರುವಾಗ ಕ್ಲಿಷ್ಟಕರ ಮಂತ್ರಗಳು ನೆನಪಿಗೆ ಬರಲು ಸಾಧ್ಯವೇ? ಇರುವ ಸಣ್ಣ ಆಧಾರ ಜೊಂಡು. ಈಗ ಅದೂ ಸಹ ಅಲುಗಾಡುತ್ತಿದೆ.

ಬಹುಶಃ ನನ್ನ ಅಂತ್ಯ ಈ ರೀತಿ ಆಗುತ್ತದೆ ಅಂತ ಕಾಣುತ್ತದೆ ಎಂದುಕೊಂಡ ಮದಂತ. ನನ್ನನ್ನು ಯಾರೂ ಸಹ ರಕ್ಷಿಸಲಾರರು. ಹಿಡಿದುಕೊಂಡಿರುವ ಜೊಂಡು ಅಲುಗಾಡುತ್ತಿದೆ. ಅದು ಬೇರಿನ ಸಮೇತ ಯಾವಾಗ ಬೇಕಾದರೂ ಕಿತ್ತು ಬರಬಹುದು.

* * *

ಕಾರು ಚಲಿಸುತ್ತಿದೆ. ಮೊದಲೇ ಮನಸ್ಸು ಸರಿಯಿರಲಿಲ್ಲ. ಈಗಂತೂ ಅದು ಮತ್ತಷ್ಟು ವ್ಯಗ್ರಗೊಂಡಿತ್ತು. ಆ ದೃಶ್ಯ ಕಂಡಿದ್ದ. ಮನಸ್ಸು ಒಡೆದು ಹೋಗಿದೆ. ನಂಬಿಕೆ ನುಚ್ಚುನೂರಾಗಿದೆ. ಮನೋಹರ ಮೊಬೈಲ್‌ಅನ್ನು ತೆಗೆದು ಕೆಲವು ನಂಬರ್ ಪ್ರೆಸ್ ಮಾಡಿದ. ಹೆಂಡತಿ ಮತ್ತು ಮಗಳಿಗೆ ತಿಳಿಸಬೇಕು. ತಾನು ಕಂಡಿದ್ದನ್ನು ಹೇಳುವ ಆತುರ.

`ಗುಂಯ್... ಗುಂಯ್' ಎಂಬ ಶಬ್ದ ಶಬ್ದ. ಹಲವಾರು ಸಲ ಪ್ರಯತ್ನಿಸಿದ. ಆದರೆ ಲೈನ್ ಸಿಗುತ್ತಿಲ್ಲ. ಫ್ರೀಕ್ವೆನ್ಸಿಗಳ ಸಹಾಯದಿಂದ ಕೆಲಸ ಮಾಡುವ ಮೊಬೈಲ್ ಈಗ ಕೆಟ್ಟು ಹೋಗಿರುವ ಕ್ಯಾಲಿಕ್ಯುಲೇಟರ್‌ನಂತೆ ಕಂಡುಬರುತ್ತಿದೆ. ಸ್ವಲ್ಪ ಹೊತ್ತಿನ ನಂತರ ಪುನಃ ಟ್ರೈ ಮಾಡಬೇಕು ಅಂತ ಅಂದುಕೊಂಡ. ಕಾರು ಚಲಿಸುತ್ತಿದೆ. ಸೋಲಿಗಪುರ ಒಂದು ಕಿ.ಮೀ. ಎಂಬ ಮೈಲಿಕಲ್ಲು ಕಂಡಿತು. ಎದೆಯ ಬಡಿತ ಜಾಸ್ತಿಯಾಗುತ್ತಿದೆ. ಇನ್ನೇನು ಕೆಲವೇ ನಿಮಿಷಗಳಲ್ಲಿ ಸೋಲಿಗಪುರ ತಲುಪುತ್ತೇನೆ.

ಏನೋ ಚಡಪಡಿಕೆ... ಆತಂಕ. ಕಾರು ಊರನ್ನು ಪ್ರವೇಶಿಸಿತು. ಮನೋಹರ ಕಾರನ್ನು ನಿಲ್ಲಿಸಿ ಈಗ ಇಳಿದು ನಡೆದುಕೊಂಡು ಹೋಗುತ್ತಿದ್ದಾನೆ. ಇಪ್ಪತ್ತು ವರ್ಷಗಳ ಅಂತರದಲ್ಲಿ ಊರು ಎಲ್ಲಾ ರೀತಿಯಿಂದಲೂ ಬದಲಾಗಿದೆ. ನಾಗರಿಕತೆಯ ಸಂಪರ್ಕ ಉಂಟಾಗಿದೆ. ದೊಡ್ಡ ದೊಡ್ಡ ಬಿಲ್ಡಿಂಗ್‌ಗಳು, ಕಾಂಪ್ಲೆಕ್ಸ್‌ಗಳು ಮತ್ತು ಹೋಟೆಲ್, ಬಾರ್‌ಗಳು ಸಹ ಇವೆ. ಒಂದು ಸಿನಿಮಾ ಥಿಯೇಟರ್ ಇದೆ. ಆಸ್ಪತ್ರೆ, ಸ್ಕೂಲ್, ಕಾಲೇಜ್ ಮತ್ತು ಪೋಸ್ಟ್ ಆಫೀಸ್ ಬಂದಿದೆ. ಅವನಿಗೆ ಗುರುತಿಸಲಾಗುತ್ತಿಲ್ಲ. ಆದರೆ ಹಿಂದೆ ನೋಡಿದ್ದನ್ನು ನೆನಪು ಮಾಡಿಕೊಂಡು ಈಗ ಆ ಮನೆಯತ್ತ ನಡೆಯುತ್ತಿದ್ದಾನೆ. ಅವನಿಗೆ ಎದುರಾಗಿ ತರಕಾರಿಯ ಬ್ಯಾಗನ್ನು ಹಿಡಿದುಕೊಂಡು ಯುವತಿಯೊಬ್ಬಳು ಬಂದಳು. ಅವಳತ್ತ ನೋಡಿದ. ಅಂದಗಾತಿ ಹೆಣ್ಣು. ಎಲ್ಲೋ ಎಲ್ಲೋ ನೋಡಿದ್ದೇನೆ. ಕ್ಷಣಕಾಲ ಅವಳ ಮುಖ ನೋಡುತ್ತಿರುವಂತೆಯೇ ಸಂತೋಷ... ಆಶ್ಚರ್ಯ ಉಂಟಾಯಿತು.

ಅರೆ... ಅರೆ... ಇದೇನಿದು ಇವಳು ಅರುಂಧತಿಯಂತೆ ಇದ್ದಾಳೆ. ಯಾರಿರಬಹುದು ಇವಳು?

ಅವಳು ಮಲ್ಲಿಗೆ! ಅವಳಿಗೂ ಸಹ ಅನುಮಾನ ಬಂದಿದೆ. ಅದು ಸೋಲಿಗಪುರದ ರಸ್ತೆ. ಅವರಿಬ್ಬರೂ ಎದುರುಬದುರಾಗಿ ನಿಂತಿದ್ದಾರೆ. ಪರಸ್ಪರ ಆಶ್ಚರ್ಯಅನುಮಾನದಿಂದ ಮುಖ ನೋಡುತ್ತಿದ್ದಾರೆ. ಮಲ್ಲಿಗೆಗೆ ನೆನಪಾಯಿತು. ಹ್ಞಾಂ... ಹ್ಞಾಂ... ಈ ಮುಖವನ್ನು ಫೋಟೊದಲ್ಲಿ ನೋಡಿದ್ದೇನೆ. ಸಂದೇಹವೇ ಇಲ್ಲ. ಅದೇ ಮುಖ. ನನ್ನ ತಾಯಿಯ ಜೊತೆ ಇರುವ ವ್ಯಕ್ತಿ ಇದನ್ನು ದೃಢಪಡಿಸಿಕೊಳ್ಳಬೇಕು ಎಂದುಕೊಂಡು ಅವನ ಹತ್ತಿರ ಬರುತ್ತಾ ಮಲ್ಲಿಗೆ `ನೀವು... ನೀವು ಮನೋಹರ ತಾನೆ?'

ಆಶ್ಚರ್ಯವಾಗುತ್ತಿದೆ ಅವನಿಗೆ. ವಿಶ್ವಸುಂದರಿಗೇನು ಕಡಿಮೆಯಿಲ್ಲ ಈ ಚೆಲುವೆ. ಇವಳಿಗೆ ನನ್ನ ಹೆಸರು ಹೇಗೆ ತಿಳಿಯಿತು ಎಂದುಕೊಂಡು ಅದನ್ನೇ ಅವಳ ಹತ್ತಿರ ಕೇಳಿದಾಗ,

`ನಿಮ್ಮ ಹೆಂಡತಿ ಅರುಂಧತಿ ತಾನೆ?'

ಮನೋಹರ ಸಂತೋಷ, ಆತುರದಿಂದ `ನೀನು... ನೀನು ಯಾರು? ಈ ವಿವರಗಳೆಲ್ಲಾ ನಿನಗೆ...'

`ಹೇಗೋ ಗೊತ್ತಾಯಿತು. ನನ್ನ ಊಹೆ ಸರಿಯಾಗಿದ್ದರೆ ನೀವು ರುದ್ರನಾಗ ಮಾವನನ್ನು ನೋಡಲು ಹೋಗುತ್ತೀರಿ.' ರುದ್ರನಾಗ ಎಂಬ ಹೆಸರನ್ನು ಕೇಳಿದ ಕೂಡಲೇ ಬೆಚ್ಚಿಬಿದ್ದ ಮನೋಹರ.

ಆತುರದಿಂದ 'ರುದ್ರನಾಗ...'

'ಖಂಡಿತಾ ಬದುಕಿದ್ದಾರೆ. ನೀವು ಬಂದೇ ಬರುತ್ತೀರ ಅಂತ ಕಾಯುತ್ತಿದ್ದಾರೆ...'

ಪರಮಾಶ್ಚರ್ಯದೊಂದಿಗೆ ಭಯ ಸಹ ಉಂಟಾಗುತ್ತಿದೆ ಮನೋಹರನಿಗೆ.

'ನೀನು... ನೀನು...'

ಮಲ್ಲಿಗೆ 'ನಾನ್ಯಾರು ಏನು ಅಂತ ಹೇಳಲು ನನಗೆ ಸ್ವಾತಂತ್ರ್ಯ ಇಲ್ಲ. ಅದನ್ನು ರುದ್ರಮಾವ ಹೇಳುತ್ತಾರೆ' ಎಂದು ಬಿರಬಿರನೆ ನಡೆದಳು.

ಅತ್ತಲೇ ನೋಡುತ್ತಿದ್ದಾನೆ. ಅವಳನ್ನು ನೋಡುತ್ತಿದ್ದರೆ ಏನೋ ಒಂದು ರೀತಿಯ ಆನಂದ ಉಂಟಾಗುತ್ತಿದೆ. ಏನೋ ಅನುಮಾನ ಬರುತ್ತಿದೆ. ಪ್ರಾಯದಲ್ಲಿ ಅರುಂಧತಿ ನೂರಕ್ಕೆ ನೂರು ಭಾಗ ಈ ಹೆಣ್ಣಿನಂತೆಯೇ ಇದ್ದಳು. ರುದ್ರನನ್ನು ಮಾವ ಎನ್ನುತ್ತಿದ್ದಾಳೆ. ಸಂತೋಷ... ಸಂದೇಹ. ಒಂದು ವೇಳೆ ಹೀಗಾಗಿರಬಹುದೆ? ಈ ಸಡಗರದಲ್ಲಿ ಮನೋಹರ ಮುಖ್ಯವಾದುದನ್ನೇ ಪೂರ್ತಿಯಾಗಿ ಮರೆತಿದ್ದ.

ಅದು ಕೇವಲ ಎರಡು ಗಂಟೆಗಳ ಹಿಂದೆ ತಾನು ಕಂಡಿದ್ದ ದೃಶ್ಯ. ರಸ್ತೆಯಲ್ಲಿ ಇವನ ಕಾರು ಟ್ರಬಲ್ ನೀಡಿದ್ದರಿಂದ ನೀರನ್ನು ತರಲು ಕಾಡಿನ ರಸ್ತೆಯಲ್ಲಿ ಬರುತ್ತಿದ್ದಾಗ ಬೇರೊಂದು ಕಾರನ್ನು ಕಂಡಿದ್ದ. ಕಾರಿನ ಅಸಹ್ಯಕರ ದೃಶ್ಯವನ್ನು ಮರೆಯಬಾರದಿತ್ತು. ಅದನ್ನು ಈಗ ಮರೆತಿದ್ದಾನೆ.

* * *

ಅದು ಕೆಸರಿನ ಗುಂಡಿ. ಮದಂತನ ದೇಹ ಕೆಸರಿನಲ್ಲಿ ಇಳಿಯುತ್ತಿದೆ. ಹಿಡಿದಿದ್ದ ಜೊಂಡು ಅಲುಗಾಡುತ್ತಿದೆ. ಆಗ ಕಂಡಿತು ಬೆಳಕು. ಕಾರಿನ ಹೆಡ್‌ಲೈಟ್‌ನ ಬೆಳಕು. ಮದಂತ ಜೋರಾಗಿ ಕೂಗಿಕೊಂಡ.

'ಕಾಪಾಡಿ... ಕಾಪಾಡಿ... ಪ್ಲೀಸ್' ಕಾರು ಗಕ್ಕನೆ ನಿಂತುಕೊಂಡಿತು. ಡೋರ್ ತೆಗೆದುಕೊಂಡು ಅವಳು ಇಳಿದಳು. ಜೀನ್ಸ್ ಪ್ಯಾಂಟ್ ಮತ್ತು ಟೀ ಶರ್ಟ್ ಅನ್ನು ಧರಿಸಿಕೊಂಡಿದ್ದಾಳೆ. ಬಾಬ್ ಮಾಡಿರುವ ತಲೆಯ ಕೂದಲು ಬೀಸುತ್ತಿರುವ ಗಾಳಿಯಿಂದಾಗಿ ಹಾರಾಡುತ್ತಿದೆ. ಕೂಲಿಂಗ್ ಗ್ಲಾಸ್ ಧರಿಸಿದ್ದಾಳೆ. ಅಂಥ ಸುಂದರಿಯೇನಲ್ಲ. ಅವಳು ಕೆಸರಿನಲ್ಲಿ ಮುಳುಗುತ್ತಿರುವ ಮದಂತನ ಕಕಡೆ ನೋಡಿದಳು. ಅನುಕಂಪ ಉಂಟಾಯಿತು. ಅವನನ್ನು ಕಾಪಾಡಲೇಬೇಕು ಎಂದುಕೊಂಡು ಸುತ್ತಲೂ ನೋಡುತ್ತಿರುವಾಗ ಕಂಡು ಬಂದಿತು ಉದ್ದನೆಯ ಮರದ ಕೊಂಬೆ. ಅದನ್ನು ಎತ್ತಿಕೊಂಡಳು. ಮದಂತನಲ್ಲಿ ಆಸೆ ಮೂಡಿತು. ಇವಳು ಸರಿಯಾಗಿ ಪ್ರಯತ್ನಿಸಿದರೆ ನನ್ನ ಪ್ರಾಣ ಉಳಿಯಬಹುದು ಎಂದುಕೊಂಡು ಕೈ ಚಾಚಿದ. ಅವಳು ಮರದ ಕೊಂಬೆಯನ್ನು ತೂರಿಸಿದ ಕೂಡಲೇ ಅದನ್ನು ಹಿಡಿದುಕೊಂಡ. ಅವನು ಕೊಂಬೆಯನ್ನು ಎಳೆದುಬಿಟ್ಟ. ಈ ರಭಸ ತಡೆಯಲಾರದೆ ಮುಂದಕ್ಕೆ ಮುಗ್ಗರಿಸಿದಳು